# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - MONDAY 3-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 2 ವಾರಗಳ ಗರಿಷ್ಠ ಮಟ್ಟಕ್ಕೆ

ಕ್ರೂಡ್ ಆಯಿಲ್ (ಕಚ್ಚಾ ಎಣ್ಣೆ) ದರಗಳು ಏರಿಕೆಯಾದ್ದರಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮಧ್ಯಾಹ್ನ ವಿರಾಮದ ವೇಳೆಗೆ 3 ಶೇಕಡಾ ( 2.6) ಹೆಚ್ಚಳವಾಗಿ 3858 ರಿಂಗಿಟ್ಸ್ ($ 812.85) ಆಗಿ ಹೆಚ್ಚಳವಾಗಿದೆ.

## ಬ್ಯಾಡಗಿ ಮೆಣಸಿನಕಾಯಿ ಆವಕ ಹೆಚ್ಚಳವಿದ್ದರೂ ದರವೂ ಹೆಚ್ಚಳ

ದಿನವಹಿ ಬ್ಯಾಡಗಿ ಮೆಣಸಿಕಾಯಿ ಆಕ ಮಾರುಕಟ್ಟೆಗೆ 1.50 ಲಕ್ಷ ಚೀಲಕ್ಕೂ ಅಧಿಕವಿದ್ದರೂ ದರವೂ ಹೆಚ್ಚಳವಿದೆ. ಬೇಡಿಕೆ ಹೆಚ್ಚಳವಿರುವುದರಿಂದ ದರ ಇಳಿಕೆಯಾಗುತ್ತಿಲ್ಲವೆನ್ನಲಾಗಿದೆ. ಉತ್ತರಭಾರತದಲ್ಲಿ ಮಳೆಯಿಂದ ಕೆಂಪು ಮೆಣಸಿನಕಾಯಿ ಅಲ್ಪ ಪ್ರಮಾಣ ಹಾನಿಯಾಗುವ ಸಾಧ್ಯತೆಯಿದೆ. ದೇಶೀ ಹಾಗೂ ರಫ್ತು ಬೇಡಿಕೆ ಹೆಚ್ಚಳವಿರುವುದರಿಂದ ದರ ಹೆಚ್ಚಳವಿದೆ. ಹಿಂದಿನ 3 ವಾರಗಳಿಂದ ಮಾರುಕಟ್ಟೆಗೆ ಸತತವಾಗಿ 1 ಲಕ್ಷ ಚೀಲಗಳು ಹೆಚ್ಚು ಆವಕವಾಗುತ್ತಿದೆಯೆನ್ನಲಾಗಿದೆ. ಆವಕ 1.84 ಲಕ್ಷ ಚೀಲಗಳ ದಾಖಲೆ ಈ ವರ್ಷ ಅತಿ ಹೆಚ್ಚಿನ ಆವಕವೆನ್ನಲಾಗಿದೆ. ಆವಕ ಸತತ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ.

## 2023 ಮಾರ್ಚನಲ್ಲಿ ಅಂತ್ಯವಾದ ಆರ್ಥಿಕ ವರ್ಷದಲ್ಲಿ ಕಾಫಿ ರಫ್ತಿನಿಂದ 18 ಶೇಕಡಾ ಅಧಿಕ ಆದಾಯ

2023 ಮಾರ್ಚನಲ್ಲಿ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ ಭಾರತದಿಂದ ರೂಪಾಯಿ ಮೌಲ್ಯದಲ್ಲಿ ಕಾಫಿ ರಫ್ತು ಹಿಂದಿನ ವರ್ಷಕ್ಕಿಂತ 18 ಶೇಕಡಾ ಹೆಚ್ಚಳವಾಗಿದೆ. ಹಿಂದಿನ ವರ್ಷ 765.50 ಕೋಟಿ ಮೌಲ್ಯದ ಕಾಫಿ ರಫ್ತಾಗಿದ್ದು, ವರ್ಷ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ 9.33 ಕೋಟಿ ಮೌಲ್ಯ ಕಾಫಿ ರಫ್ತಾಗಿದೆಯೆನ್ನಲಾಗಿದೆ. ಸತತ 2 ಆರ್ಥಿಕ ವರ್ಷಗಳಲ್ಲಿ 1 ಬಿಲಿಯನ್ ಡಾಲರ್‌ಗೂ ಮಿಕ್ಕಿ ರಫ್ತು ವ್ಯವಹಾರ ಕಂಡಿದೆ. ಆದರೆ ರಫ್ತು ಗಾತ್ರದಲ್ಲಿ 4.13 ಲಕ್ಷ ಟನ್ ಗಳಿಂದ 3.98 ಲಕ್ಷ ಟನ್‌ಗಳಿಂದ 3.98 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ.